For more job news visit : www.kpscvaani.com

ಜೈವಿಕಭದ್ರತೆ ತಾಂತ್ರಿಕತೆಗಳ ರಕ್ಷಣಾ ಸಂಸ್ಥೆ (ಡಿಐಬಿಟಿ)
ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ)
(ರಕ್ಷಣಾ ಸಚಿವಾಲಯ, ಭಾರತ ಸರ್ಕಾರ)
ಸಿದ್ಧಾರ್ಥನಗರ, ಮೈಸೂರು-570011

ಡಿಆರ್‌ಡಿಒ ರಿಸರ್ಚ್ ಅಸೋಸಿಯೇಟ್ (ಆರ್‌ಎ) ಮತ್ತು ಜೂನಿಯರ್ ರಿಸರ್ಚ್ ಫೆಲೋಶಿಪ್‌ಗಳು (ಜೆಆರ್‌ಎಫ್) ಹುದ್ದೆಗಳ ನೇಮಕಾತಿಯ ಪ್ರಕಟಣೆ

ಜೈವಿಕಭದ್ರತೆಯ ತಾಂತ್ರಿಕತೆಗಳ ರಕ್ಷಣಾ ಸಂಸ್ಥೆ (ಡಿಐಬಿಟಿ), ಮೈಸೂರು, ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ (ಡಿಆರ್‌ಡಿಒ), ರಕ್ಷಣಾ ಸಚಿವಾಲಯ, ಭಾರತ ಸರ್ಕಾರದಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಆಹಾರಜನ್ಯ ರೋಗಕಾರಕಗಳು ಮತ್ತು ಜೈವಿಕಭದ್ರತೆಯ ಮಹತ್ವ ಹೊಂದಿರುವ ವಿಷಕಾರಿ ಅಂಶಗಳು ಹಾಗೂ ಮಿಲಿಟರಿ ಪೌಷ್ಟಿಕತೆಯನ್ನು ಪತ್ತೆ ಮಾಡುವ ತಾಂತ್ರಿಕತೆಗಳನ್ನು ಅಭಿವೃದ್ಧಿಪಡಿಸುವುದು ಡಿಐಬಿಟಿ, ಮೈಸೂರಿನ ಮುಖ್ಯಕರ್ತವ್ಯಗಳಲ್ಲಿ ಒಂದಾಗಿದೆ. ಇದೀಗ ಡಿಐಬಿಟಿಯು ರಕ್ಷಣಾ ವಲಯದ ಸಂಶೋಧನೆಗೆ ಸಂಬಂಧಿಸಿದ ಸಂಶೋಧನಾ ಕಾರ್ಯಗಳಲ್ಲಿ ರಿಸರ್ಚ್ ಅಸೋಸಿಯೇಟ್ (ಆರ್‌ಎ) ಮತ್ತು ಜೂನಿಯರ್ ರಿಸರ್ಚ್ ಫೆಲೋಸ್ (ಜೆಆರ್‌ಎಫ್) ಆಗಿ ಕಾರ್ಯನಿರ್ವಹಿಸಲು ಬಯಸುವ ಅಗತ್ಯ ವಿದ್ಯಾರ್ಹತೆಗಳನ್ನು ಹೊಂದಿರುವ ಪ್ರತಿಭಾನ್ವಿತ ಯುವ ಭಾರತೀಯ ಪ್ರಜೆಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಕ್ರ. ಸಂ.	ಡಿಆರ್‌ಡಿಒ ಫೆಲೋಶಿಪ್	ಹುದ್ದೆಯ ವಿವರ	ಖಾಲಿ ಹುದ್ದೆಗಳ ಸಂ.	ಅಗತ್ಯ ವಿದ್ಯಾರ್ಹತೆ
1	ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ/ಆಹಾರ ಸಂಸ್ಕರಣೆ ಇಂಜಿನಿಯರಿಂಗ್/ಆಹಾರ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ/ಆಹಾರ ಇಂಜಿನಿಯರಿಂಗ್	ರಿಸರ್ಚ್ ಅಸೋಸಿಯೇಟ್	01	ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ/ಆಹಾರ ಸಂಸ್ಕರಣೆ ಇಂಜಿನಿಯರಿಂಗ್/ಆಹಾರ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ/ಆಹಾರ ಇಂಜಿನಿಯರಿಂಗ್‌ನಲ್ಲಿ ಪಿಎಚ್.ಡಿ **ಅಥವಾ** ಆಹಾರ ಸಂಸ್ಕರಣೆ ಇಂಜಿನಿಯರಿಂಗ್/ಆಹಾರ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ/ಆಹಾರ ಇಂಜಿನಿಯರಿಂಗ್/ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಎಂ.ಟೆಕ್ ಪದವಿ, ಸೈನ್ಸ್ ಸೈಟೇಷನ್ ಇಂಡೆಕ್ಸ್‌ಡ್ (ಎಸ್‌ಸಿಐ) ಜರ್ನಲ್‌ನಲ್ಲಿ ಕನಿಷ್ಠ ಒಂದು ಸಂಶೋಧನಾ ವರದಿ ಪ್ರಕಟವಾಗಿರುವುದರ ಜತೆಗೆ ಕನಿಷ್ಠ 3 ವರ್ಷಗಳ ಸಂಶೋಧನಾ ಅನುಭವ ಹೊಂದಿರಬೇಕು.
2	ಮೈಕ್ರೋಬಯಾಲಜಿ/ಜೈವಿಕತಂತ್ರಜ್ಞಾನ/ಬಯೋಕೆಮಿಸ್ಟ್ರಿ/ಬಯೋಇನ್ಫಾರ್ಮೆಟಿಕ್ಸ್/ಮೆಡಿಕಲ್ ಜೆನೆಟಿಕ್ಸ್	ಜೆಆರ್‌ಎಫ್	07	ಮಾನ್ಯತೆ ಹೊಂದಿರುವ ವಿಶ್ವವಿದ್ಯಾಲಯ/ಸಂಸ್ಥೆಯಿಂದ ಮೊದಲ ದರ್ಜೆಯ ಸ್ನಾತಕೋತ್ತರ ಪದವಿ ಹಾಗೂ ಎನ್‌ಇಟಿ/ಬಿಎಟಿಇ ಅರ್ಹತೆ ಹೊಂದಿರಬೇಕು. **ಅಥವಾ** ವೃತ್ತಿಪರ ಕೋರ್ಸ್‌ನಲ್ಲಿ (ಎಂ.ಟೆಕ್) ಮೊದಲ ದರ್ಜೆಯೊಂದಿಗೆ ಸ್ನಾತಕೋತ್ತರ ಪದವಿ
3	ಪಾಲಿಮರ್ ವಿಜ್ಞಾನ ಮತ್ತು ತಂತ್ರಜ್ಞಾನ/ ಪಾಲಿಮರ್ ವಿಜ್ಞಾನ/ಪಾಲಿಮರ್ ರಸಾಯನಶಾಸ್ತ್ರ/ರಸಾಯನಶಾಸ್ತ್ರ	ಜೆಆರ್‌ಎಫ್	02	ವೃತ್ತಿಪರ ಕೋರ್ಸ್‌ನಲ್ಲಿ (ಬಿ.ಇ./ಬಿ.ಟೆಕ್) ಪ್ರಥಮ ದರ್ಜೆಯೊಂದಿಗೆ ಪದವಿ ಹಾಗೂ ಎನ್‌ಇಟಿ/ಬಿಎಟಿಇ ಅರ್ಹತೆ ಹೊಂದಿರಬೇಕು. **ಅಥವಾ** ವೃತ್ತಿಪರ ಕೋರ್ಸ್‌ನಲ್ಲಿ (ಎಂ.ಟೆಕ್) ಪ್ರಥಮ ದರ್ಜೆಯೊಂದಿಗೆ ಸ್ನಾತಕೋತ್ತರ ಪದವಿ **ಇಲ್ಲವೇ** ಮಾನ್ಯತೆ ಹೊಂದಿರುವ ವಿಶ್ವವಿದ್ಯಾಲಯ/ಸಂಸ್ಥೆಯಿಂದ ಎಂ.ಎಸ್‌ಸಿ..ಯಲ್ಲಿ ಪ್ರಥಮ ದರ್ಜೆಯೊಂದಿಗೆ ಸ್ನಾತಕೋತ್ತರ ಪದವಿ ಹಾಗೂ ಎನ್‌ಇಟಿ/ಬಿಎಟಿಇ ಅರ್ಹತೆ ಹೊಂದಿರಬೇಕು.
4	ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ/ಆಹಾರ ತಂತ್ರಜ್ಞಾನ/ಆಹಾರ ವಿಜ್ಞಾನ/ಆಹಾರ ಸಂಸ್ಕರಣೆ ಇಂಜಿನಿಯರಿಂಗ್/ಆಹಾರ ವಿಜ್ಞಾನ ಮತ್ತು ಪೌಷ್ಟಿಕತೆ	ಜೆಆರ್‌ಎಫ್	01	ಮಾನ್ಯತೆ ಹೊಂದಿರುವ ವಿಶ್ವವಿದ್ಯಾಲಯ/ಸಂಸ್ಥೆಯಿಂದ ಪ್ರಥಮ ದರ್ಜೆಯೊಂದಿಗೆ ಸ್ನಾತಕೋತ್ತರ ಪದವಿ ಹಾಗೂ ಎನ್‌ಇಟಿ/ಬಿಎಟಿಇ ಅರ್ಹತೆ ಹೊಂದಿರಬೇಕು. **ಅಥವಾ** ವೃತ್ತಿಪರ ಕೋರ್ಸ್‌ನಲ್ಲಿ (ಎಂ.ಟೆಕ್) ಪ್ರಥಮ ದರ್ಜೆಯೊಂದಿಗೆ ಸ್ನಾತಕೋತ್ತರ ಪದವಿ

ರಿಸರ್ಚ್ ಅಸೋಸಿಯೇಟ್ (ಆರ್‌ಎ)

- ಮಾಸಿಕ ಶಿಷ್ಯವೇತನ ರೂ.67,000/- + ಮಾಹೆಯಾನ ಎಚ್‌ಆರ್‌ಎ.
- ರಿಸರ್ಚ್ ಅಸೋಸಿಯೇಟ್‌ನ ಕಾರ್ಯಾವಧಿ ಎರಡು ವರ್ಷಗಳಾಗಿರುತ್ತದೆ.
- ಸಂದರ್ಶನದ ದಿನಾಂಕದಂದು ಆರ್‌ಎ ಅಭ್ಯರ್ಥಿಯ ವಯಸ್ಸು 35 ವರ್ಷಕ್ಕಿಂತ ಹೆಚ್ಚಾಗಿರಬಾರದು. ಎಸ್‌ಸಿ/ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷಗಳು ಹಾಗೂ ಒಬಿಸಿ ಅಭ್ಯರ್ಥಿಗಳಿಗೆ 03 ವರ್ಷಗಳ ವಯೋಮಿತಿ ಸಡಿಲಿಕೆ ಇರುತ್ತದೆ.

ಜೂನಿಯರ್ ರಿಸರ್ಚ್ ಫೆಲೋ (ಜೆಆರ್‌ಎಫ್)

- ಮಾಸಿಕ ಶಿಷ್ಯವೇತನ ರೂ.37,000/- + ಮಾಹೆಯಾನ ಎಚ್‌ಆರ್‌ಎ
- ಫೆಲೋಶಿಪ್‌ನ ಕಾರ್ಯಾವಧಿ ಪ್ರಾರಂಭಿಕವಾಗಿ ಎರಡು ವರ್ಷಗಳಾಗಿದ್ದು ಕಾರ್ಯಕ್ಷಮತೆಯನ್ನು ಆಧರಿಸಿ 3ನೇ ವರ್ಷಕ್ಕೆ ಹಾಗೂ ಅಗತ್ಯವಿದ್ದಲ್ಲಿ 4ನೇ ವರ್ಷಕ್ಕೂ ಕಾರ್ಯಾವಧಿಯನ್ನು ವಿಸ್ತರಿಸಬಹುದಾಗಿದೆ.
- ಜೆಆರ್‌ಎಫ್ ಅಭ್ಯರ್ಥಿಗಳ ವಯಸ್ಸು ಸಂದರ್ಶನದ ದಿನದಂದು 28 ವರ್ಷಗಳನ್ನು ಮೀರುವಂತಿಲ್ಲ. ಎಸ್‌ಸಿ/ಎಸ್‌ಟಿ ಅಭ್ಯರ್ಥಿಗಳಿಗೆ 05 ವರ್ಷಗಳು ಹಾಗೂ ಒಬಿಸಿ ಅಭ್ಯರ್ಥಿಗಳಿಗೆ 03 ವರ್ಷಗಳ ವಯೋಮಿತಿ ಸಡಿಲಿಕೆ ಇರುತ್ತದೆ.

ಸಾಮಾನ್ಯ ಸೂಚನೆಗಳು

- ಡಿಆರ್‌ಡಿಒ ನಿಯಮಗಳಾನುಸಾರ ಆರ್‌ಎ/ಜೆಆರ್‌ಎಫ್ ಪದವಿ ನೀಡಲಾಗುವುದು. ಫೆಲೋಶಿಪ್ ನೀಸಿದ ಮಾತ್ರಕ್ಕೆ ಡಿಆರ್‌ಡಿಒದಲ್ಲಿ ಉದ್ಯೋಗ ನೇಮಕಾತಿಗೆ ಹಕ್ಕು ಪ್ರತಿಪಾದಿಸುವಂತಿಲ್ಲ. ಯಾವುದೇ ಅಭ್ಯರ್ಥಿಗಳು ಪ್ರವೇಶಾತಿಯನ್ನು ಒಂದು ಹಕ್ಕು ಎಂಬಂತೆ ಹರಿಭಾವಿಸುವಂತಿಲ್ಲ.
- ಮೇಲೆ ತಿಳಿಸಿರುವಂತೆ ಮಾನ್ಯತೆ ಹೊಂದಿರುವ ವಿಶ್ವವಿದ್ಯಾಲಯಗಳು/ಸಂಸ್ಥೆಗಳಿಂದ ಅಗತ್ಯ ವಿದ್ಯಾರ್ಹತೆ(ಗಳು) ಅನ್ನು ಹೊಂದಿರುವ ಅಭ್ಯರ್ಥಿಗಳು ಮಾತ್ರವೇ ಅರ್ಜಿ ಸಲ್ಲಿಸಬೇಕು.
- ಅಗತ್ಯ ದಾಖಲಾತಿಗಳನ್ನು ಲಗತ್ತಿಸಿದ ಭರ್ತಿ ಮಾಡಿದ ಅರ್ಜಿಗಳನ್ನು ಕೇಂದ್ರ ಮುಖ್ಯಸ್ಥರು, ಡಿಐಬಿಟಿ, ಸಿದ್ಧಾರ್ಥನಗರ, ಮೈಸೂರು-570011 ವಿಳಾಸಕ್ಕೆ ಸಲ್ಲಿಸಬೇಕು.
- ಸಂದರ್ಶನದ ಸಂದರ್ಭದಲ್ಲಿ ಅಭ್ಯರ್ಥಿಗಳು ತಮ್ಮೆಲ್ಲ ಮೂಲದಾಖಲಾತಿಗಳನ್ನು ಹಾಜರುಪಡಿಸತಕ್ಕದ್ದು. ಅಲ್ಲದೆ, ಅಭ್ಯರ್ಥಿಗಳು ಸಂದರ್ಶನದ ವೇಳೆ ತಮ್ಮ ಅರ್ಜಿಗೆ ಲಗತ್ತಿಸಿರುವ ಎಲ್ಲ ದಾಖಲಾತಿಗಳ ನಕಲು ಪ್ರತಿಗಳ ಜತೆಗೆ ಸರ್ಕಾರದಿಂದ ಕೊಡಮಾಡಲಾಗಿರುವ ಅಧಿಕೃತ ಗುರುತಿನಚೀಟಿಗಳನ್ನು (ಅಂದರೆ ಆಧಾರ್ ಕಾರ್ಡ್, ಪಾಸ್‌ಪೋರ್ಟ್, ಅಥವಾ ಚಾಲನಾಪರವಾನಗಿ) ಹಾಜರುಪಡಿಸತಕ್ಕದ್ದು.
- ಸರ್ಕಾರಿ/ಸಾರ್ವಜನಿಕ ಉದ್ಯಮ/ಸ್ವಾಯತ್ತ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಭ್ಯರ್ಥಿಗಳು ಸಕ್ಷಮ ಮಾರ್ಗದಲ್ಲಿ ಅರ್ಜಿಗಳನ್ನು ಸಲ್ಲಿಸಬೇಕು ಮತ್ತು ಸಂದರ್ಶನದ ಸಂದರ್ಭದಲ್ಲಿ ತಮ್ಮ ಉದ್ಯೋಗದಾತ ಸಂಸ್ಥೆಯ ನಿರಾಕ್ಷೇಪಣಾ ಪತ್ರವನ್ನು ಕಡ್ಡಾಯವಾಗಿರುತ್ತದೆ.
- ಸಂದರ್ಶನಕ್ಕೆ ಅಂತಿಮಗೊಳಿಸಲಾದ ಅಭ್ಯರ್ಥಿಗಳಿಗೆ ಅಗತ್ಯವೆನಿಸಿದಲ್ಲಿ ಲಿಖಿತ ಪರೀಕ್ಷೆ ನಡೆಸಲಾಗುವುದು. ಪರೀಕ್ಷೆಯಲ್ಲಿ ಒಂದು ಅಂಕಿ ಪ್ರಶ್ನೆಗಳು, ಬಹುಆಯ್ಕೆ ಪ್ರಶ್ನೆಗಳನ್ನು ಒಳಗೊಂಡಿರುವ ಪ್ರಶ್ನೆಪತ್ರಿಕೆ ನೀಡಲಾಗುವುದು.
- ಸಂದರ್ಶನದಲ್ಲಿ ಅಭ್ಯರ್ಥಿಗಳ ಪ್ರದರ್ಶನದನ್ನು ಆಧರಿಸಿ, ಲಭ್ಯವಿರುವ ಖಾಲಿ ಹುದ್ದೆಗಳು ಮತ್ತು ಭವಿಷ್ಯದಲ್ಲಿ ಖಾಲಿಯಾಗುವ ಹುದ್ದೆಗಳನ್ನು ಅಂದಾಜಿಸಿ ಅಯ್ಕೆಯಾದ ಅಭ್ಯರ್ಥಿಗಳ ಪ್ಯಾನಲ್ ಅನ್ನು ಸಿದ್ಧಪಡಿಸಲಾಗುವುದು. ಈ ಪ್ಯಾನಲ್, ಸಂದರ್ಶನದ ದಿನಾಂಕದಿಂದ ಒಂದು ವರ್ಷದ ಅವಧಿವರೆಗೆ ಕಾರ್ಯನಿರ್ವಹಿಸಲಿದೆ. ದಿನಾದರೂ ಅಂತಾತುರ್ಯಗಳು ಉಂಟಾದಲ್ಲಿ ಕೇಂದ್ರ ಮುಖ್ಯಸ್ಥರು, ಡಿಐಬಿಟಿ, ಮೈಸೂರು ಅವರ ತೀರ್ಮಾನವೇ ಅಂತಿಮವಾಗಿರುತ್ತದೆ.
- ಸದರಿ ಜಾಹೀರಾತು ಪ್ರಕಟವಾದ ದಿನದ ನಂತರದ 30ನೇ ದಿನ ಅರ್ಜಿಯನ್ನು ಸಲ್ಲಿಸಲು ಕೊನೇ ದಿನವಾಗಿರುತ್ತದೆ.
- ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳಿಗೆ ಮತ್ತು ಉದ್ಯೋಗಕ್ಕೆ ಸೇರ್ಪಡೆಗೊಳ್ಳುವ ಅಭ್ಯರ್ಥಿಗಳಿಗೆ ಯಾವುದೇ ರೀತಿಯ ಟಿಎ/ಡಿಎ ಅನ್ನು ಕೊಡಲಾಗುವುದಿಲ್ಲ

ಮುಖ್ಯಸ್ಥರು, ಎಚ್‌ಆರ್‌ಡಿ
ಮೈಸೂರು ಡಿಐಬಿಟಿಯ ಕೇಂದ್ರ ಮುಖ್ಯಸ್ಥರ
ಪರವಾಗಿ